(2) ತೆಂಗಿನ ಮರಗಳಿಗೆ ಕಪ್ಪುಹುಳು ರೋಗ ಹರಡಿರುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ, ನಾವು ಹಳ್ಳಿ ಕಡೆ ಹೋಗುವಂತಿಲ್ಲ, ನಿನ್ನೆ ತೆಂಗಿನರೋಗದ ಬಗ್ಗೆ ಪ್ರಸ್ತಾಪಿಸಿದ್ದೆವು. ಈಗ ತೋಟಗಾರಿಕೆ ಸಚಿವರು ಇದ್ದಾರೆ.

ಶ್ರೀ ಎ. ಕೃಷ್ಣಪ್ಪ : 10ನೇ ತಾರೀಖು ಶ್ರೀ ವಾಟಾಳ್ ನಾಗರಾಜರು ಈ ಮನೆಯಲ್ಲಿ ತೆಂಗಿನ ಗಿಡಗಳಿಗೆ ಕಪ್ಪು ಹುಳು ಏನು ಬಿದ್ದಿದೆ ಅದರ ಬಗ್ಗೆ ಒಂದು ಸಮಿತಿಯನ್ನು ಕಳಿಸಿ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಆ ಸಮಿತಿ ನಾಳೆ ಬೆಳಿಗ್ಗೆ 8 ಗಂಟೆಗೆ ಪ್ರವಾಸ ಹೊರಡುತ್ತದೆ. ಮೊದಲು ಅವರು ಚಾಮರಾಜನಗರ, ನಾಗಮಂಗಲ, ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಿಗೆ ಹೋಗುತ್ತಿದ್ದಾರೆ. ಎಚ್ಆರ್ ರೆಡ್ಡಿ ಪ್ರಾಧ್ಯಾಪಕರು, ಕೃಷಿ ಕಾಲೇಜ್, ಮೆನ್ಸೊಂಬಾ ಅಧ್ಯಾಪಕರು, ಜಿಕೆವಿಕೆ, ಡಾ: ರಾಜಗೋಪಾಲ್, ಡಿಆರ್, ಪ್ರಾಧ್ಯಾಪಕರು ಕೀಟಶಾಸ್ತ್ರ ಉದಯಕುಮಾರ್ ಪ್ರಾಧ್ಯಾಪಕರು, ಜಿಕೆವಿಕೆ, ಸಿದ್ಧರಾಮೇಗೌಡರು - ಈ ತಂಡ ನಾಳೆ 8 ಗಂಟೆಗೆ ಹೋಗುತ್ತಿದೆ. ಅವರ ವರದಿ ಬಂದ ತಕ್ಷಣ ಕೀಟನಾಶಕದ ವಿಚಾರದಲ್ಲಿ ಏನೇನು ಅಗತ್ಯ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ಒಂದು ಪ್ರೊಟೊಕಾಲ್ ವಿಷಯ. ಮುಖ್ಯಮಂತ್ರಿಗಳು 20ನೇ ತಾರೀಖು ನನ್ನ ಕ್ಷೇತ್ರಕ್ಕೆ ಬರುತ್ತಿದ್ದಾರೆ.

(ಗದ್ದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರಿಗೆ ಔಷಧಿಗೆ ಹಣ ಕೊಟ್ಟರೆ ಸಾಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಔಷಧಿಗೆ ಹಣ ಕೊಟ್ಟರೆ ಸಾಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಿಂಧ್ಯರವರು ಔಷಧಿಗೆ ಹಣ ಕೊಟ್ಟರೆ ಸಾಕೆಂದು ಹೇಳುತ್ತಿದ್ದಾರೆ. ಹಣದ ಕೊರತೆ ಯಾವುದಾದರೂ ಕ್ಷೇತ್ರದಲ್ಲಿದ್ದರೆ ಹೇಳಿ ನಾನು ತುರ್ತಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಹಣ ಕೊಟ್ಟಿದ್ದೇವೆ.

ಅಧ್ಯಕ್ಷರು : ನಿನ್ನೆಯಿಂದ ಅವರು ಪ್ರತಿಪಾದನೆ ಮಾಡುತ್ತಿದ್ದಾರೆ. ತಕ್ಷಣ ಔಷಧಿಯನ್ನು ಬಿಡುಗಡೆ ಮಾಡಿ ರೋಗ ನಿವಾರಣೆ ಮಾಡಿ ಎಂದು ಕೇಳುತ್ತಿದ್ದಾರೆ. ಅದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳಿ.

ಶ್ರೀ ಎ. ಕೃಷ್ಣಪ್ಪ : ಆಗಲೇ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಔಷಧಿಯಿಂದ ಪ್ರಯೋಜನವಾಗುತ್ತಿಲ್ಲ.

ಶ್ರೀ ಎ. ಕೃಷ್ಣಪ್ಪ : ಒಬ್ಬರು ಔಷಧಿಯತ್ತ ಪ್ರಯೋಜನವಿಲ್ಲವೆಂದು ಹೇಳುತ್ತಾರೆ, ಮತ್ತೊಬ್ಬರು ಹುಳದಿಂದ ಪ್ರಯೋಜನವಿಲ್ಲವೆನ್ನುತ್ತಾರೆ, ಮತ್ತೊಬ್ಬರು ಟೀಮ್ ಕಳಿಸಿ ಎಂದು ಹೇಳುತ್ತಾರೆ.

(3) ಸರಕಾರಿ ಕಾರ್ಯಕ್ರಮಗಳಲ್ಲಿ ಶಾಸಕರುಗಳಿಗೆ ಪ್ರಾಧ್ಯಾನ್ಯತೆ.

ಶ್ರೀ ಎಂ. ನಾರಾಯಣಸ್ವಾಮಿ : 21 ರಂದು ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಭೇಟಿ ಕೊಡುತ್ತಿದ್ದಾರೆ. ಅಲ್ಲಿ ಮುಜರಾಯಿ ಇಲಾಖೆಯವರು ಮತ್ತು ಆಂಧ್ರದವರು ಇಬ್ಬರೂ ಸೇರಿಕೊಂಡು ಒಂದು ಚೌಲ್ಟ್ರಿ ಕಟ್ಟಿಸಿದ್ದಾರೆ. ಇದಕ್ಕೆ